ಶಿಕ್ಷಣದ ಹಕ್ಕು
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು – 560 001

ಸಂಖ್ಯೆ: ಸಶಿಅ/ಒಒಎಸ್‌ಸಿ/ಕಟ್ಟಡ ಕಾರ್ಮಿಕರು/11–12/12–13 ದಿನಾಂಕ: 18.02.2013

## ಜ್ಞಾಪನ

ವಿಷಯ: NCLP ಮತ್ತು SCLP ಶಾಲೆಯ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಬಗ್ಗೆ.
ಉಲ್ಲೇಖ: MHRD ಪತ್ರ ಸಂಖ್ಯೆ: F.17-44/2011-EE 1, ದಿನಾಂಕ: 24.12.2012.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವುದು, ಸಾರ್ವತ್ರಿಕ ಅವಕಾಶ ಮತ್ತು ಧಾರಣದ ದೃಷ್ಟಿಯಿಂದ ಈ ಬಗ್ಗೆ ವಿಶೇಷ ಗಮನ ನೀಡುವುದು ಅಗತ್ಯವಿದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಆಯಾ ವರ್ಷದಲ್ಲಿ ಗುರುತಿಸಿದ ನಂತರ, ಆ ಮಕ್ಕಳನ್ನು ಹತ್ತಿರದ ಶಾಲೆಗೆ ಮೊದಲು ನೊಂದಾಯಿಸಿ (Enroll) ವಿಶೇಷ ತರಬೇತಿಗೆ ಒಳಪಡಿಸಿ, ನಂತರ ವಯಸ್ಸಿಗೆ ಸಂವಾದಿಯಾಗಿ (age-appropriate) ನಿರ್ದಿಷ್ಟಪಡಿಸಿದ ತರಗತಿಗೆ ದಾಖಲು ಮಾಡುವುದು (actual admission) ಕಡ್ಡಾಯವಾಗಿದೆ.

ಈ ಹಿನ್ನಲೆಯಲ್ಲಿ, ತಮ್ಮ ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಯಿಂದ ನಡೆಯುತ್ತಿರುವ NCLP ಮತ್ತು SCLP ಶಾಲೆಗಳಲ್ಲಿ ಇರುವಂತಹ ಎಲ್ಲಾ ಮಕ್ಕಳನ್ನು ಹತ್ತಿರದ ಶಾಲೆಗೆ ದಾಖಲು ಮಾಡಿ, NCLP ಮತ್ತು SCLP ಶಾಲೆಗಳನ್ನು ವಿಶೇಷ ತರಬೇತಿ ಕೇಂದ್ರಗಳೆಂದು ಪರಿಗಣಿಸಿ, ತರಬೇತಿ ನೀಡಿದ ನಂತರ ಶಾಲಾ ವ್ಯಾಪ್ತಿಗೆ ತರಬೇಕಾಗಿದೆ. ಈ ನಿಟ್ಟಿನಲ್ಲಿ ತಮ್ಮ ತಮ್ಮ ಜಿಲ್ಲೆಗಳಲ್ಲಿ ಕಾರ್ಮಿಕ ಇಲಾಖೆವತಿಯಿಂದ ನಡೆಸುತ್ತಿರುವ ಎನ್.ಸಿ.ಎಲ್.ಪಿ. ಶಾಲೆಗಳ ಅಧಿಕಾರಿಗಳನ್ನು ಕೂಡಲೇ ಭೇಟಿ ನೀಡಿ ಬ್ಲಾಕ್‌ವಾರು 7 ರಿಂದ 14 ವಯೋಮಾನದ ಎಲ್ಲಾ ಮಕ್ಕಳ ಪಟ್ಟಿಯನ್ನು ಸಂಬಂಧಿಸಿದ ಅಧಿಕಾರಿಗಳ ದೃಡಿಕರಣದೊಂದಿಗೆ ಪಡೆದು, ಈಗಾಗಲೇ **2013–14ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಗುರುತಿಸಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿಯಲ್ಲಿ ಸೇರಿರುವ ಬಗ್ಗೆ ಪರಿಶೀಲಿಸಿ, ಸೇರಿರದೇ ಇರುವ ಮಕ್ಕಳ ಪೋಟೋ ಸಹಿತ ಪೂರ್ಣ ಮಾಹಿತಿಯನ್ನು ಸಂಬಂಧಿಸಿದ ಇಲಾಖೆಯಿಂದ ಅನುಬಂಧ 1ರಲ್ಲಿ ಪಡೆದು 2013–14ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಳ್ಳಲು ಉಲ್ಲೇಖ ಪತ್ರದಲ್ಲಿ ತಿಳಿಸಿರುವುದರಿಂದ ಕೂಡಲೇ ಕಾರ್ಯಪ್ರವೃತ್ತರಾಗಲು ತಿಳಿಸಿದೆ.** (ಉಲ್ಲೇಖ ಪತ್ರವನ್ನು ಲಗತ್ತಿಸಿದೆ.)

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ
ಬೆಂಗಳೂರು

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ

1) ಸಂಬಂಧಿಸಿದ ಜಿಲ್ಲೆಗಳ ಡಿ.ಡಿ.ಪಿ.ಐ. ಮತ್ತು .ಡಿ.ವೈ.ಪಿ.ಸಿ, ಬಿಜಾಪುರ, ರಾಯಚೂರು, ಧಾರವಾಡ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ ಮತ್ತು ದಕ್ಷಿಣ, ಬೆಳಗಾಂ, ಕೊಪ್ಪಳ, ತುಮಕೂರು, ದಾವಣಗೆರೆ, ಹಾವೇರಿ, ಮೈಸೂರು, ಬಾಗಲಕೋಟೆ, ಚಿತ್ರದುರ್ಗ, ಬಳ್ಳಾರಿ, ಕೋಲಾರ ಮತ್ತು ಮಂಡ್ಯ ಇವರಿಗೆ

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA